"179. Subject to such rules as may be prescribed by the Government, the Secretary or a Panchayet or a Chief Executive Officer of a Board shall furnish copies of any final order, or proceeding, or resolution of any Panchayet or Board as the case may be on the application of any person and on payment of fees prescribed if any."

The motion was negatived.

Mr. SPEAKER.—Schedule I. There is an amendment by the Hon'ble Minister.

The Hon'ble Sri R. CHENNIGA RAMIAH.—I beg to move.—

"That in Schedule I—A. House Tax.—at the end of the last item the following shall be added:

"In respect of buildings, the value of which exceeds the above amount, the tax may be levied at the rate of four annas for every hundred rupees but not exceeding twenty-five rupees in any case."

ಇದರಲ್ಲಿ ಪರಮಾವಧಿ ಮಿತಿಯನ್ನು ಗೊತ್ತುಮಾಡಿದೆ. ಇದೇನೂ ಚರ್ಚಾಸ್ಪದವಾದ ವಿಚಾರವಲ್ಲ, ಎಲ್ಲರೂ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Amendment moved:—

"That in Schedule I—A. House Tax.—at the end of the last item the following shall be added:—

"In respect of buildings, the value of which exceeds the above amount, the tax may be levied at the rate of four annas for every hundred rupees but not exceeding twenty-five rupees in any case."

ಶ್ರೀ ಎಲ್. ಸಿದ್ದಪ್ಪನವರು.—ಇದು ಬಹಳ ಜಾಸ್ತಿ ಯಾಗುತ್ತದೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—25 ರೂಪಾಯಿ ಪರಮಾವಧಿ ಮಿತಿ ಅಷ್ಟೆ. ಇಷ್ಟನ್ನೂ ಹಾಕಬೇಕೆಂದೇನೂ ಇಲ್ಲ.

ಶ್ರೀ ಎಲ್. ಸಿದ್ದಪ್ಪನವರು.—ಪರಮಾವಧಿ ಮಿತಿ ಯಾದರೂ ಇಷ್ಟು ಜಾಸ್ತಿ ಏಕೆ ಗೊತ್ತು ಮಾಡಬೇಕು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಳ್ಳಿಗಳಲ್ಲಿ ಕೆಲವು ಕಡೆ ಹತ್ತು ಸಾವಿರ ಇಪ್ಪತ್ತು ಸಾವಿರ ರೂಪಾಯಿ ಬಾಳುವ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿದ್ದಾರೆ. ಹೇಗಿದ್ದರೂ ಕಂದಾಯವನ್ನು ಗೊತ್ತು ಮಾಡುವವರು ಅಲ್ಲಿಯ ಪಂಚಾಯ್ತಿಯವರು ತಾನೆ? ಒಂದು ಹಳ್ಳಿಯಲ್ಲಿ ದೊಡ್ಡ ಸಾಹುಕಾರರಿದ್ದು ಅವರು ಐವತ್ತು ಸಾವಿರ ರೂಪಾಯಿನ ಮನೆ ಕಟ್ಟಿ ಅದಕ್ಕೆ ನೂರು ನೂರೈವತ್ತು ರೂಪಾಯಿ ಬಾಡಿಗೆ ಕೊಡುವವರೂ ಇದ್ದರ ಅಂಥಾ ಕಟ್ಟಡಕ್ಕೆ ಸರಿಯಾದ ಕಂದಾಯವನ್ನು ಹಾಕುವುದಕ್ಕೆ ಅವಕಾಶವಿರಲೆಂದು ಈ ತಿದ್ದುಪಡಿಯನ್ನು ತಂದಿರುವುದು.

ಶ್ರೀ ಎಲ್. ಸಿದ್ದಪ್ಪನವರು.—ಗ್ರಾಮಾಂತರ ಪ್ರದೇಶಗಳಲ್ಲಿ ಒಳ್ಳೆಯ ಕಟ್ಟಡಗಳನ್ನು ಕಟ್ಟುವುದಕ್ಕೆ ಸ್ವಲ್ಪ ಪ್ರೋತ್ಸಾಹವಿರಬೇಕು.

In a village that upper limit will be too heavy and I oppose that amendment.

The Hon'ble Sri K. T. BHASHYAM.—It is the maximum that we have put: not exceeding Rs. 25. Supposing a man builds a house of the value of about Rs. 10,000. He will pay Rs. 25 house tax. And if a man puts up a building worth about Rs. 15,000, still he will pay only Rs. 25. Nobody prevents him from putting up a building. Supposing a man puts up a building of the value of Rs. 5,000. He may be required to pay Rs. 12-8. We do not charge him Rs. 25. It all depends upon the value of the building. The maximum shall be Rs. 25. He shall not be called upon to pay more. In fact, the amendment helps the view point which Sri Siddappa is sponsoring.

Sri L. SIDDAPPA.—You fix a maximum, I have no objection to it. But while fixing a maximum Rs. 25 would be too heavy. You make it 'Rs. 15.

The Hon'ble Sri K.T. BHASHYAM.—What is the difficulty? We have put Rs. 25 as the maximum. In any case we do not want to tax a man more than Rs. 25. But why do you say 'Rs. 15'? Supposing a man puts up a building worth about Rs. 10,000. He will have to pay tax which will not exceed Rs. 25 in any case. A man who is capable of putting up a building worth Rs. 10,000 can pay Rs. 25 as tax.

*ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕ ಮಗಳೂರು ಜಿಲ್ಲೆ—ನಿಮ್ನ ಪಂಗಡ).—ಹಳ್ಳಿಗಳಲ್ಲಿ ಮನೆಗಳನ್ನು ಕಟ್ಟುವುದೇ ಕಷ್ಟ. ಎಷ್ಟೋ ಕಡೆ ಮನೆಗಳನ್ನು ಕಟ್ಟಿ, ಸಾಲ ಮಾಡಿಕೊಂಡು ಪಾಪರ್ ಆಗಿದ್ದಾರೆ. ಈಗ ಮನೆಗಳ ಮೇಲೆ ಹಾಕಿರುವ ಸ್ವಲ್ಪ ಕಂದಾಯವನ್ನು ಕೂಡ ಸರಿಯಾಗಿ ಕೊಡುತ್ತಿಲ್ಲ. ಮನೆಗಳನ್ನು ರಿಪೇರಿ ಮಾಡುವುದಕ್ಕೂ ಹಳ್ಳಿಯವರಿಗೆ ಶಕ್ತಿಯಿಲ್ಲ. ಹೀಗಿರುವಾಗ ಅವರಿಗೆ 25 ರೂಪಾಯಿ ಮನೆ ಕಂದಾಯ ಕೊಡುವ ಶಕ್ತಿ ಹೇಗೆ ಬರಬೇಕು? ಹತ್ತು ರೂಪಾಯಿ ಕಂದಾಯ ಹಾಕಿದರೂ ಕೊಡದೇ ಇರುವವರು ಎಷ್ಟೋ ಜನರಿದ್ದಾರೆ. ಎಷ್ಟೋ ವರ್ಷಗಳಿಂದ ಜನರ ಮೇಲೆ ಮನೆ ಕಂದಾಯದ ಬಾಕಿ 50, 60, 80 ರೂಪಾಯಿ ಬಾಕಿ ಬಿದ್ದಿದೆ. ಹೀಗಿರುವಾಗ ಮನೆಯ ಮೇಲೆ 25 ರೂಪಾಯಿ ಕಂದಾಯ ಹಾಕುವುದೆಂದರೆ, ಇದರಿಂದ ಹಳ್ಳಿಯ ಜನರಿಗೆ ಬಹಳ ತೊಂದರೆಯಾಗುತ್ತದೆ. ಅವರೇನಾದರೂ ಹೆಚ್ಚು ಬಾಡಿಗೆ ವಸೂಲು ಮಾಡಿದರೆ, ಹಾಕಬಹುದು. ಹಳ್ಳಿಗಳಲ್ಲಿ ಬಾಡಿಗೆ ಕೂಡ ಸಿಕ್ಕುವುದಿಲ್ಲ. ಆದಕಾರಣ ಹಿಂದೆ ಏನು ಗೊತ್ತು ಮಾಡಿದ್ದಾರೋ ಹಾಗೆಯೇ ಗೊತ್ತು ಮಾಡಿದರೆ ಉತ್ತಮ. 25 ರೂಪಾಯಿ ಬಹಳ ಹೆಚ್ಚು.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೂರು ರೂಪಾಯಿಗೆ ನಾಲ್ಕಾಣೆಯಂತಾದರೂ 25 ರೂಪಾಯಿನ ಮೇಲೆ ಕಂದಾಯ ಹಾಕಬಾರದೆಂದು ಈ ಪರಮಾವಧಿ ಮಿತಿಯನ್ನು 25 ರೂಪಾಯಿ ಎಂದು ಗೊತ್ತು ಮಾಡಿರುವುದು. ಅಲ್ಲದೆ ಹಳ್ಳಿಯವರಿಗೆ ಎಲ್ಲಾ ಅನುಕೂಲಗಳೂ ಬೇಕು. ಈ ಅನುಕೂಲಗಳನ್ನು ಕಲ್ಪಿಸಿಕೊಡಲು ಪಂಚಾಯಿತಿಗೆ ತಕ್ಕಷ್ಟು ಹಣ ಬರದಿದ್ದರೆ ಪಂಚಾಯಿತಿಯ ಕೆಲಸಗಳು ಹೇಗೆ ನಡೆಯಬೇಕು?

*ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಪಶ್ಚಿಮ).—ಶ್ರೀಮಾನ್ ತಿಮ್ಮಾಬೋಯಿಯವರು ಏಕೆ ಈ ವಾದವನ್ನು ತಂದರೋ ನನಗೆ ಗೊತ್ತಿಲ್ಲ. ಅವರ ವಾದ ನನಗೆ ಅರ್ಥವಾಗುವುದಿಲ್ಲ. 25 ಸಾವಿರ ರೂಪಾಯಿಗಳ ಮನೆ ಕಟ್ಟುತಕ್ಕ ಮನುಷ್ಯನಿಗೆ ಬೇರಿನ್ನಾವ ವರಮಾನವೂ ಇಲ್ಲದಿರುವ ಗ್ರಾಮ ಪಂಚಾಯಿತಿಗೆ 25 ರೂಪಾಯಿ ಕಂದಾಯ ಕೊಡುವುದಕ್ಕಾಗುವುದಿಲ್ಲವೆಂದರೆ, ಆ ಮನುಷ್ಯ 25 ಸಾವಿರ ರೂಪಾಯಿ ಖರ್ಚುಮಾಡಿ ಅಲ್ಲಿ ಮನೆಯನ್ನೇಕೆ ಕಟ್ಟಬೇಕು? ದೊಡ್ಡ ಮನೆಯೇ ಬೇಕು, ಹಳ್ಳಿಯಲ್ಲಿದ್ದುಕೊಂಡು ಪಾಳೆಯಗಾರರ ಹಾಗಿರಬೇಕು, ಆದರೆ ಮಾತ್ರ ಕಂದಾಯವನ್ನು ಜಾಸ್ತಿ ಕೊಡಬಾರದು ಎಂದರೆ ಹೇಗೆ? ಇದು ನ್ಯಾಯವಲ್ಲ. ನೂರು ರೂಪಾಯಿಗೆ ನಾಲ್ಕಾಣೆಯಾದರೆ, ಒಂದು ಸಾವಿರಕ್ಕೆ ಎರಡೂವರೆ ರೂಪಾಯಿ, ಹತ್ತು ಸಾವಿರಕ್ಕೆ 25 ರೂಪಾಯಿಯಾಗುತ್ತದೆ. ಐವತ್ತು ಸಾವಿರ ರೂಪಾಯಿನ ಮನೆ ಕಟ್ಟಿದರೂ ಅವನು 25 ರೂಪಾಯಿ ಮಾತ್ರ ಕೊಡಬೇಕು, ಈ ತಿದ್ದುಪಡಿಯ ಪ್ರಕಾರ ನ್ಯಾಯವಾಗಿ ನೋಡಿದರೆ ಈ ಪರಮಾವಧಿ ಮಿತಿಯನ್ನೇ ಸರ್ಕಾರದವರು ಗೊತ್ತು

ಮಾಡಬಾರದಾಗಿತ್ತು. ಏನೋ ರಿಯಾಯಿತಿ ರ ಲೆಂದು ತೋರಿಸಿದರೆ ಅದೂ ಬೇಡವೆಂದರೆ, ಅದನ್ನು ತೆಗೆದುಹಾಕಿಬಿಡೋಣ. ಲೆಕ್ಕಾಚಾರದ ಪ್ರಕಾರ ಎಷ್ಟಾದರೆ ಅಷ್ಟನ್ನು ಕೊಡಲಿ. ಹಳ್ಳಿಯಲ್ಲಿ ಐಶ್ವರ್ಯವಂತರು ಮನೆಗಳನ್ನು ಕಟ್ಟಿದರೆ ಅವರಪರ ಯೋಗ್ಯತಾನುಸಾರವಾಗಿ ಕಂದಾಯ ಕೊಡಲಿ; ಪಟ್ಟಣಗಳಲ್ಲಿ ಈ ರೀತಿ ಪರಮಾವಧಿ ಪರಿಮಿತಿಯನ್ನೇನೂ ಗೊತ್ತು ಮಾಡಿಲ್ಲ. ಹೆಚ್ಚು ಹಣ ಖರ್ಚುಮಾಡಿ ಮನೆ ಕಟ್ಟಿಸಿದವರು ಹೆಚ್ಚು ಕಂದಾಯ ಕೊಡಬೇಕು. Bride must suffer pain ಎನ್ನುವ ಹಾಗೆ ಮೈಯೆಲ್ಲ ತುಂಬ ಒಡವೆ ಹಾಕಿಕೊಂಡು ಕತ್ತು ನೋಯುತ್ತದೆ ಎಂದರೆ ಹೇಗೆ? ನೂರು ರೂಪಾಯಿಗೆ ನಾಲ್ಕಾಣೆ ಯಂತೆ ದರ ಇದೆ. ಇದಕ್ಕೆ upper limit ಹಾಕುವುದೇ ತಪ್ಪೆ? ಹೀಗೆ 2 ರೂಪಾಯಿನ ಮೇಲೆ ಹಾಕಬಾರದೆಂದು ಮಿತಿಯನ್ನು ಗೊತ್ತುಮಾಡಿ ಅವರ ಕಣ್ಣಿಗೆ ಬೀಳುವ ಹಾಗೆ ಮಾಡಿದ್ದಾರೆ.

ಶ್ರೀ ಎಲ್. ಸಿದ್ದಪ್ಪನವರು.—ಮೊದಲು ನೂರಕ್ಕೆ ನಾಲ್ಕಾಣೆ ಎಂಬುದಿರಲಿಲ್ಲ, ಈ ತಿದ್ದುಪಡಿಯಿಲ್ಲಿದೆ.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನಾಲ್ಕಾಣೆ ಎನ್ನುವುದು ಆದರಲ್ಲಿಯೂ ಇದೆ.

You please see list "Buildings of the value not exceeding Rs. 25. 0-4-0". In the case of buildings of the value exceeding Rs. 1,500 you will have to pay only Rs. 10. If at that rate we put, you will have to pay through the nose. We say: "upper limit is only Rs. 25." If a man is able to put up a house of the value of Rs. 10,000 in a village, he should bear the entire village panchayet expenses. He must come forward and say 'I will look after the village.'

ಇದನ್ನು ಬಿಟ್ಟು 25 ರೂಪಾಯಿನಿಂದ 15ರೂಪಾಯಿ ಮಾಡಿ ಎಂದು ಹೇಳಿ ಎಲ್ಲರೂ ಕೊಡುವುದನ್ನು ತಪ್ಪಿಸಿಕೊಂಡರೆ ಪಂಚಾಯಿತಿಯ ಕೆಲಸ ನಡೆಯುವುದು ಹೇಗೆ? ಹೆಚ್ಚು ಹಣವಿರುವವರು ಹೆಚ್ಚು ಕಂದಾಯ ಕೊಡಬೇಕು. ಇದರಲ್ಲಿ ಏನಿದ್ದರೂ upper limit ಗೊತ್ತು ಮಾಡಿದೆ.

ಶ್ರೀ ಎ. ಭೀಮಪ್ಪನಾಯಕರು.—ನೂರಕ್ಕೆ ನಾಲ್ಕಾಣೆಯಂತಿದ್ದು after certain limit, 10 ಸಾವಿರ ಆದಮೇಲೆ ನಾಲ್ಕಾಣೆ ಇರುವುದನ್ನು ಎರಡಾಣೆ ಮಾಡಿ ಎಂದು ಕೇಳಬೇಕಾದರೆ ಕೇಳಬಹುದಾಗಿತ್ತು. ಈಗ ಹತ್ತು ಸಾವಿರದ ಮೇಲೆ ಯಾರೂ ಕಟ್ಟುವುದಿಲ್ಲ ವೆಂಬ ಭಾವನೆಯ ಮೇಲೆ ಈ ಮಿತಿಯನ್ನು ಗೊತ್ತು ಮಾಡಿದ್ದಾರೆ. ಕೆಲವರು 25 ಅಥವಾ 30 ಸಾವಿರ ರೂಪಾಯಿ ಖರ್ಚುಮಾಡಿ ಮನೆಗಳನ್ನು ಕಟ್ಟಬಹುದು.....

The Hon'ble Sri K. T. BHASHYAM.—How can that be? A poor man is called upon to pay 4 annas for Rs. 25 value. It means for Rs. 100 he must pay Re. 1.

ಶ್ರೀ ಎ. ಭೀಮಪ್ಪನಾಯಕರು.—ಹತ್ತು ಸಾವಿರ ರೂಪಾಯಿನ ಮೇಲೆ ಬಾಳುವ ಮನೆ ಕಟ್ಟಿದರೆ ಇನ್ನೂ ಹೆಚ್ಚು ಕಂದಾಯ ಕೊಡುವ ಹಾಗೆ ಮಾಡಬೇಕಾಗಿತ್ತು.

ಶ್ರೀ ಎಲ್. ಸಿದ್ದಪ್ಪನವರು.—ಇದೇನೂ ವರಮಾನ ತೆರಿಗೆಯಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಈ ಸಣ್ಣ ವಿಷಯದಲ್ಲಿ ಇಷ್ಟು ದೊಡ್ಡ ಚರ್ಚೆಗೆ ಅವಕಾಶವಿರುತ್ತದೆಂದು ನಾನು ನಂಬಿರಲಿಲ್ಲ. ಗ್ರಾಮ ಪಂಚಾಯ್ತಿಯವರು ಜನಗಳಿಗೆ ಹೆಚ್ಚು ಹೆಚ್ಚಿನ ಅನುಕೂಲಗಳನ್ನು ಮಾಡಿಕೊಡಲು ಅವಕಾಶವಿರಬೇಕೆಂಬ ದೃಷ್ಟಿಯಿಂದ ಇದನ್ನು ತಂದಿದೆ. ಹೆಚ್ಚು ಅನುಕೂಲಗಳನ್ನು ಮಾಡಬೇಕಾದರೆ ಹೆಚ್ಚು ದುಡ್ಡು ಬೇಕಾಗುತ್ತದೆ. ದುಡ್ಡನ್ನೇನು ಅವರು ತಯಾರು ಮಾಡುವುದಕ್ಕಾಗುತ್ತದೆಯೇ? ಜನಗಳಿಂದಲೇ ವಸೂಲು ಮಾಡಿಕೊಂಡು ಜನಗಳಿಗೇ ಉಪಯೋಗಿಸಬೇಕು. ಆದ್ದರಿಂದ ಹೀಗೆ ಹೆಚ್ಚಿನ ಅನುಕೂಲತೆಗಳು ಬೇಕೆಂದು ಆಸೆಪಡುವಾಗ ಹೆಚ್ಚಿನ ಕಂದಾಯವನ್ನೂ ಕೊಡುವುದಕ್ಕೆ ಒಪ್ಪಿಕೊಳ್ಳಬೇಕೆಂಬುದು ನ್ಯಾಯವಾದದ್ದು. ತೆರಿಗೆಯು ಕೊಡತಕ್ಕವನ ಸಂಪಾದನಾ ಶಕ್ತಿಯನ್ನನುಸರಿಸಬೇಕು. ಕಮ್ಮಿ ಆದಾಯವಿರುವವನು ಕಮ್ಮಿ ಕೊಡುವಂತೆ ಮಾಡಬೇಕು. ಸಂಪಾದನಾ ಶಕ್ತಿ ಹೆಚ್ಚಿರುವವರೇ ದೊಡ್ಡ ದೊಡ್ಡ ಮನೆಗಳನ್ನು ಕಟ್ಟುವುದು, ದೊಡ್ಡ ದೊಡ್ಡ ವ್ಯಾಪಾರ ವ್ಯವಹಾರ ಇತ್ಯಾದಿಗಳನ್ನು ನಡೆಸುವುದು. ಸಣ್ಣ ಮನೆಗಳನ್ನು ಕಟ್ಟಿಕೊಂಡಿದ್ದು ಅಲ್ಪ ಆದಾಯವಿರುವವರಿಂದ ಯಾರೂ ಹೆಚ್ಚಿಗೆ ಕಂದಾಯ ಕೊಡಿ ಎಂದು ಹೇಳುವುದು ಸರಿಯಲ್ಲ. ಅಲ್ಲದೆ ಈಗ ತಂದಿರುವ ತಿದ್ದುಪಡಿಯಲ್ಲಿ ಕಂದಾಯ ಹಾಕುವುದರಲ್ಲಿ ಒಂದು upper limit ಗೊತ್ತುಮಾಡಿದೆ. ಅಷ್ಟನ್ನೂ ಪೂರ್ತಿಯಾಗಿ ಹಾಕುತ್ತಾರೆಂದು ಅರ್ಥವಾಗುವುದಿಲ್ಲ. ಒಬ್ಬ ವ್ಯಕ್ತಿಯು 50,000 ರೂಪಾಯಿಗಳ ಮೇಲ್ಪಟ್ಟು ಬೆಲೆ ಬಾಳುವ ಮನೆ ಕಟ್ಟಿದರೂ ಮೇಲ್ಪಟ್ಟದ ನಿಗದಿಗಿಂತ ಅವನು ಹೆಚ್ಚಿಗೆ ಕೊಡಬೇಕಾದ್ದಿಲ್ಲ. ಪಾರ್ಶ್ವವಾಗಿ ನೋಡಿದರೆ, ಹೆಚ್ಚು ಹೆಚ್ಚಿಗೆ ಹಣ ಖರ್ಚುಮಾಡಿ ದೊಡ್ಡ ಮನೆ ಕಟ್ಟುವವರಿಗೆ ಹೆಚ್ಚು ಹೆಚ್ಚಿಗೆ ತೆರಿಗೆ ಬೀಳುವಂತೆ ಮುಂದೆ ಒಂದು ತಿದ್ದುಪಡಿ ತನ್ನಿ, ಸದ್ಯಕ್ಕೆ ಇದನ್ನು ಒಪ್ಪಿಕೊಳ್ಳುತ್ತೇವೆ ಎಂದು ಹೇಳಬೇಕು. ಇದು ಸಾಧು. I would have appreciated that argument.

ಶ್ರೀ ಎಲ್ ಸಿದ್ದಪ್ಪನವರು.—ತಮ್ಮ ವಾದ ನೋಡಿದರೆ ಅದನ್ನೂ ಮಾಡಲೇ ಬೇಕಲ್ಲ!

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹೌದು, ಯಾವನು ದೊಡ್ಡಮನೆ ಕಟ್ಟಿದ್ದಾನೋ ಅವನು ಹೆಚ್ಚಿಗೆ ಕೊಡುವುದರಲ್ಲಿ ತಪ್ಪೇನು? ಹಾಗೆ ನೋಡಿದರೆ, ಬಹಳ ಬಡತನದಲ್ಲಿರುವವನ ವಿಷಯದಲ್ಲಿ ನಾಲ್ಕು ಆಣೆ ಹಾಕಿರುವುದನ್ನು ತಪ್ಪಿಸಿ ಒಂದಾಣೆ ಹಾಕಿ ಎನ್ನಬೇಕಿತ್ತು. ಒಂದು ಹುಲ್ಲು ಮನೆ ಕಟ್ಟಿಕೊಂಡಿರುವ ಸಂಸಾರಿಗೆ 4 ಆಣೆಯೂ ಹೆಚ್ಚು.

Sri L. SIDDAPPA.—What an inconsistent argument it is!

Sri H. M. CHANNABASAPPA.—I am unable to see the inconsistency. I would be much obliged to the Hon'ble Member to show me the inconsistency. 25 ರೂಪಾಯಿನ ಹುಲ್ಲು ಪೆಡ್ಡನ್ನು ಕಟ್ಟಿರುವವನ ಸಂಪಾದನಾ ಶಕ್ತಿ ಬಹಳ ಕಡಿಮೆ, ಅವನಿಗೆ ತೆರಿಗೆ ವಜಾ ಮಾಡಿ ಎಂದು ಹೇಳಿದ್ದರೆ, ನಾನು ಸಂತೋಷಪಡುತ್ತಿದ್ದೆ. I would have been very much grateful. On the other hand he is opposing a thing which is calculated to

(SRI H. M. CHANNABASAPPA.)

make the abler man pay a little more to the panchayet. This is a wholesome suggestion which must be accepted without any opposition.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು—ಆದರೆ ಒಂದು ವಿಷಯ. 10 ರೂಪಾಯಿ ಕಂದಾಯ ಹಾಕಿಯೇ ಲಕ್ಷಗಟ್ಟಲೆ ಬಾಕಿ ಇದೆ. ಅಂಥಾದ್ದರಲ್ಲಿ 25 ರೂಪಾಯಿ ಹಾಕಿದರೆ ಬಹುಶಃ ಕೋಟಿ ಗಟ್ಟಲೆ ಆಗುತ್ತದೆ.

Mr. SPEAKER.—The question is :—

"That in Schedule I-A. House Tax.—at the end of the last item the following shall be added:

"In respect of buildings, the value of which exceeds the above amount, the tax may be levied at the rate of four annas for every hundred rupees but not exceeding twenty-five rupees in any case."

The motion was adopted.

Mr. SPEAKER.—Schedule I.D. There is an amendment by the Hon'ble Sri R. Chennigaramiah.

The Hon'ble Sri R. CHENNIGARAMIAH.—Sri, I beg to move:

"That in Schedule I-D. Cart Tax, the following item shall be added at the end

'Jutkas Re. 1 each per annum'."

Mr. SPEAKER.—The question is :

"That in Schedule I-D. Cart Tax, the following item shall be added at the end

'Jutkas Re. 1 each per annum'."

The motion was adopted.

Mr. SPEAKER.—The question is :

"That Schedule I, as amended, stand part of the Bill."

The motion was adopted.

Schedule I, as amended, was added to the Bill.

Mr. SPEAKER.—Schedule II. There is an amendment by the Hon'ble Sri R. Chennigaramiah.

The Hon'ble Sri R. CHENNIGARAMIAH.—Sir, I beg to move:

"That for the existing Schedule II the following schedule shall be substituted :—

"SCHEDULE II

PROFESSIONS IN RESPECT OF WHICH PROFESSION TAX MAY BE LEVIED WITH THE MAXIMUM TAX LEVIABLE

(*See Section* 41.)

CLASS I.

Every person holding any office or appointment, public or private or employed in any capacity, whose pay, salary or pension amounts to one thousand rupees a month or upwards and every person falling under any one of the following denominations whose income is estimated to amount to one thousand rupees a month or upwards :—

	Maximum per year. Rs.
1. Owners of cotton and ginning factories ...	
2. Owners of pressing factories ...	
3. Owners of flour mills, rice hullers, oil mills and of buses and lorries	
4. Manufacturers of aerated or mineral waters ...	
5. Owners of hand-loom factories and factories driven by mechanical or electrical power ...	
6. Liquor shop-keepers, toddy shop-keepers ...	25
7. Licensees of toddy bothe, bhang, ganja, opium and other intoxicating drugs ...	
8. Hotel keepers and boarding, eating, refreshment house-keepers, licensees of mutton shops ...	
9. Hawkers and itinerant vendors ...	
10. Carpenters, black smiths, tailors, barbers, potters and contractors ...	
11. Practising physicians and hakeems	

CLASS II.

Every person described in class I whose pay, salary or pension amounts, or whose income is estimated to amount to Rs. 500 a month or upwards ... 20

CLASS III.

Every person described in class I whose pay, salary or pension amounts, or whose income is estimated to amount to Rs. 300 a month or upwards ... 10

CLASS IV.

Rs.

Every person described in class I whose pay, salary or pension amounts, or whose income is estimated to amount to two hundred rupees a month or upwards 6

CLASS V.

Every person described in class I whose pay, salary or pension amounts, or whose income is estimated to amount to one hundred rupees a month or upwards ... 3

CLASS VI.

Every person described in class I whose pay, salary or pension amounts, or whose income is estimated to amount to rupees fifty a month or upwards ... 2

CLASS VII.

Every person described in class I whose pay, salary or pension amounts, or whose income is estimated to amount to rupees thirty a month or upwards ... 1"

Mr. SPEAKER.—The question is: "That for the existing Schedule II the following schedule shall be substituted:—

"SCHEDULE II.

PROFESSIONS IN RESPECT OF WHICH PROFESSION TAX MAY BE LEVIED WITH THE MAXIMUM TAX LEVIABLE.

(*See Sectin* 41.)

CLASS I.

Every person holding any office of appointment, public or private or employed in any capacity, whose pay, salary or pension amounts to one thousand rupees a month or upwards and every person falling under any one of the following denominations whose income is estimated to amount to one thousand rupees a month or upwards:—

	Maximum per year, Rs.
1. Owners of cotton and ginning factories ...	
2. Owners of pressing factories ...	
3. Owners of flour mills, rice hullers, oil mills and of buses and lorries	
4. Manufacturers of aerated or mineral waters ...	
5. Owners of hand-loom factories and factories driven by mechanical or electrical power ...	
6. Liquor shop-keepers, toddy shop-keepers ...	25
7. Licensees of toddy booths, bhang, ganja, opium and other intoxicating drugs ...	
8. Hotel keepers and boarding, eating, refreshment house-keepers, licensees of mutton shops ..	
9. Hawkers and itinerant vendors ...	
10. Carpenters, blacksmiths, tailors, barbers, potters and contractors ...	
11. Practising physicians and hakeems	

CLASS II.

Every person described in class I whose pay, salary or pension amounts, or whose income is estimated to amount to Rs. 500 a month or upwards ... 20

CLASS III.

Every person described in class I whose pay, salary or pension amounts, or whose income is estimated to amount to Rs. 300 a month or upwards ... 10

CLASS IV.

Every person described in class I whose pay, salary or pension amounts, or whose income is estimated to amount to two hundred rupees a month or upwards ... 6

CLASS V.

Every person described in class I whose pay, salary or pension amounts, or whose income is estimated to amount to one hundred rupees a month or upwards. 3

	Maximum per year. Rs.
CLASS VI.	
Every person described in class I whose pay, salary or pension amounts, or whose income is estimated to amount to rupees fifty a month or up vards ...	2
CLASS VII.	
Every person described in class I whose pay, salary or pension amounts, or whose income is estimated to amount to rupees thirty a month or upwards ...	1"

The motion was adopted.

Schedule II, as amended, was added to the Bill.

Mr. SPEAKER.—Schedule III.

There is an amendment by the Hon'ble Sri R. Chennigaramiah.

The Hon'ble Sri R. CHENNIGARAMIAH.—Sir, I beg to move:

"That in Schedule III, Part II, for Part II, blocks I to V of the existing Schedule the following shall be substituted, and the words and figures 'Block VI' on page 95 shall be omitted.

'PART II—TAX ON SHOP SITES.

The area around the temple in respect of which the fair or festival is held may be divided into suitable blocks based on the proximity thereof to the institution and the fee levied on the area occupied by the shop subject to a maximum of Rs. 8 per square yard and a minimum of Rs. 2 per square yard'."

Mr. SPEAKER.—The question is:

"That in Schedule III, Part II, for Part II blocks I to V of the existing Schedule the following shall be substituted, and the words and figures 'Block VI' on page 95 shall be omitted.

'PART II—TAX ON SHOP SITES.

The area around the temple in respect of which the fair or festival is held may be divided into suitable blocks based on the proximity thereof to the institution and the fee levied on the area occupied by the shop subject to a maximum of Rs. 8 per square yard and a minimum of Rs. 2 per square yard.

The motion was adopted.

Mr. SPEAKER.—The question is:

"That Schedule III, as amended, stand part of the Bill."

The motion was adopted.

Schedule III, as amended, was added to the Bill.

Mr. SPEAKER.—Schedule IV. The Hon'ble Sri R. Chennigaramiah has an amendment.

The Hon'ble Sri R. CHENNIGA-RAMIAH.—Sir, I beg to move:—

"That in Schedule IV, the word 'proposed' shall be omitted."

Mr. SPEAKER.—The question is:

"That in Schedule IV, the word 'proposed' shall be omitted."

The motion was adopted.

Mr. SPEAKER.—The question is:

"That Schedule IV, as amended, stand part of the Bill."

The motion was adopted.

Schedule IV, as amended, was added to the Bill.

Mr. SPEAKER.—Schedule V. The question is:

"That Schedule V stand part of the Bill."

The motion was adopted.

Schedule V was added to the Bill.

Mr. SPEAKER.—Clause 67. Discussion on an amendment to this clause was held over. It may be resumed now.

The Hon'ble Sri K. T. BHASHYAM.—Clause 67. We had discussion about the words "save as provided in section 60" being omitted and I think we may accept the amendment of Sri L. Siddappa. It is in respect of powers and functions of Vice-President when he acts as President. There was some discussion about the need for these words. There is no need for these words and we accept the amendment.

Mr. SPEAKER.—The question is:

"That in item (c) the words 'save as provided in section 60' shall be omitted."

The motion was adopted.

The Hon'ble Sri R. CHENNIGA-RAMIAH.—Sir, I am not moving my amendment to clause 67 (c), in view of the fact that the words 'save as provided in section 60' have been omitted by the amendment adopted by the House.

Mr. SPEAKER.—The question is:

"That Clause 67, as amended, stand part of the Bill."

The motion was adopted.

Clause 67, as amended, was added to the Bill.

Mr. SPEAKER.—Clause 51.

There is an amendment by Sri L. Siddappa.

Sri L. SIDDAPPA.—My amendment reads like this:

"For the words 'the District' the words 'each Taluk in the District' shall be substituted."

This is with a view to make it clear that the constituencies will be by taluks and not by districts.

Mr. SPEAKER.—Amendment moved:

"For the words 'the District' the words 'each Taluk in the District' shall be substituted."

The Hon'ble Sri R. CHENNIGA-RAMIAH.—I accept the amendment.

Mr. SPEAKER.—The question is:

"For the words 'the District' the words 'each Taluk in the District' shall be substituted."

The motion was adopted.

Mr. SPEAKER.—Sri T. Madiah Gowda has an amendment to this clause.

Sri T. MADIAH GOWDA.—My amendment is:

"After the words 'be elected', the words 'by several constituencies fixed by rules' shall be added."

In view of the previous amendment having been passed, I am not moving it.

Mr. SPEAKER.—The question is:

"That Clause 51, as amended, stand part of the Bill."

The motion was adopted.

Clause 51, as amended, was added to the Bill.

Mr. SPEAKER.—Clause 55.

Sri L. SIDDAPPA.—I beg to move:

"That in sub-clause (2) for the word 'district' the word 'constituency' shall be substituted."

This is practically a consequential amendment to the one which was accepted just now by Government.

Mr. SPEAKER.—Amendment moved:

"That in sub-clause (2) for the word 'district' the word 'constituency' shall be substituted."

The Hon'ble Sri R. CHENNIGA-RAMIAH.—I accept the amendment.

Mr. SPEAKER.—The question is :

"That in sub-clause (2) for the word 'District' the word 'constituency' shall be substituted"

The motion was adopted.

Sri T. MADIAH GOWDA.—I am not moving my amendment to this clause.

***Sri M. L. NANJARAJ URS** (Mysore District—General).—I beg to move :

"That sub-clause (2) and the proviso to it shall be deleted."

ಅಧ್ಯಕ್ಷರೇ, 55ನೆಯ ಸೆಕ್ಷನ್ನಿನಲ್ಲಿ ತಿಳಿಸಿರತಕ್ಕ ಒಳ ಕ್ಲಾಜ್ (2)ನ್ನೂ ಮತ್ತು ಅದಕ್ಕೆ ಲಗತ್ತಿಸಿರುವ ಪ್ರಾವಿಸೋವನ್ನೂ ತೆಗೆದುಹಾಕಬೇಕೆಂಬುದೇ ನನ್ನ ತಿದ್ದುಪಡಿಯ ಮುಖ್ಯ ಸಾರಾಂಶ. ಅದಕ್ಕೆ ಕಾರಣವಾದರೂ ಇಷ್ಟೆ :—ಈಗ ಸಭೆಯ ಮುಂದೆ ಚರ್ಚೆಯಾಗುತ್ತಿರುವ ಮಸೂದಾಕಾನೂನು ಇಲ್ಲಿ ಅಂಗೀಕೃತವಾದ ನಂತರ ಮುಂದಕ್ಕೆ ಇದು ದೇಶದಲ್ಲಿ ಒಂದು ಕಾನೂನಾಗಿ ಜಾರಿಗೆ ಬರತಕ್ಕದ್ದಾಗಿದೆ. ಇದರಲ್ಲ ಅನೇಕ ಸೆಕ್ಷನ್ ಗಳು ಆಡಕವಾಗಿವೆ. ಇವೆಲ್ಲವನ್ನೂ ಕೂಲಂಕಷವಾಗಿ ವಿಮರ್ಶೆ ಮಾಡಿ, ಇದಕ್ಕೆ ಅನುಮತಿ ಕೊಡತಕ್ಕದ್ದು ಬಹಳ ಜವಾಬ್ದಾರಿಯುತವಾದ ಕೆಲಸ. ಈ ಜವಾಬ್ದಾರಿಯು ಈ ಸಭೆಯ ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಸೇರಿರತಕ್ಕದ್ದಾಗಿದೆ. ಈ ಮಸೂದೆಯನ್ನು ಈಗ ಇಷ್ಟೊಂದು ಬದಲಾವಣೆ ಮಾಡಿ ತಂದಿರತಕ್ಕ ಉದ್ದೇಶವಾದರೂ, ಇನ್ನು ಮುಂದಕ್ಕೆ ಜಿಲ್ಲಾ ಬೋರ್ಡು ಮತ್ತು ಪಂಚಾಯ್ತಿಗಳ ವಿಳಿನವಾಡಿ, ತನ್ಮೂಲಕ ದೇಶದಲ್ಲರತಕ್ಕ ಪ್ರತಿಯೊಂದು ಹಳ್ಳಿಯ ಉದ್ಧಾರವನ್ನೂ ಮಾಡಬೇಕೆಂಬುದೇ ಆಗಿರುತ್ತೆ. ಇಲ್ಲಿಯತನಕ ಕೇಂದ್ರೀಕೃತವಾಗಿದ್ದ ಆಡಳಿತ ಈಗ ವಿಕೇಂದ್ರೀಕೃತ ಆಡಳಿತ ವಾಗಬೇಕೆಂಬುದಾಗಿ ಈ ಮಸೂದೆ ಈ ಸಭೆಯ ಮುಂದೆ ಬಂದಿರತಕ್ಕದ್ದಾಗಿದೆ. ಹಿಂದೆ ಮಹಾತ್ಮಾ ಗಾಂಧೀಜೀಯವರು ಏನೊಂದು ರಾಜ್ಯಾಂಗವನ್ನು ರಚಿಸಬೇಕೆಂದಿದ್ದರೋ ಅಂಥಾ ಒಂದು ಸದವಕಾಶ ಉಂಟುಮಾಡಬೇಕೆಂತಲೇ ಇದನ್ನು ಮಾಡಲಾಗಿರುತ್ತೆ. ಆದರೆ ಈಗ 55ನೆಯ ಸೆಕ್ಷನ್ (1)ನೇ ಒಳ ಕ್ಲಾಜಿನ ಪ್ರಕಾರ ಯಾರು ಹಳ್ಳಿಗಾಡುಗಳಲ್ಲೇ ವಾಸಮಾಡುತ್ತಿದ್ದು, ಅಲ್ಲೇ ಇರುತ್ತಾರೋ ಅಂಥವರು ಆಯಾಯ ಪಂಚಾಯಿತಿಗಳಿಗೆ ಚುನಾವಣೆ ಹೊಂದಿ ಸದಸ್ಯರಾಗಿ ಬರಲು, ನಂತರ ಹಾಗೆ ಆರಿಸಿ ಬಂದವರೇ ಜಿಲ್ಲಾ ಬೋರ್ಡಿಗೆ ಸದಸ್ಯರಾಗಬೇಕು ಎಂಬುದಾಗಿ ಅವಕಾಶ ಕಲ್ಪಸಿ ಕೊಡಲಾಗಿದೆ. ಹಾಗೆ ತಿಳಿಸಿದ್ದು ತದನಂತರ ಅದರ ಮುಂದಿನ ಕ್ಲಾಜಿನಲ್ಲಿ ಏನು ತಿಳಿಸಿದೆಯೆಂದರೆ, ಯಾರು ಎಲ್ಲಿ ಬೇಕಾದರೂ ಇರಲಿ ಅವರು ಆ ಪಂಚಾಯಿತಿಗಳಿಗೆ ಮೊಹತರ್ಫ ಕೊಡತಕ್ಕವರಾಗಿದ್ದರೆ ಸಾಕು, ಅಂಥವರೂ ಕೂಡ ಜಿಲ್ಲಾ ಬೋರ್ಡಿಗೆ ಸದಸ್ಯರಾಗಿ ಬರಬಹುದೆಂದು ತಿಳಿಸಲಾಗಿದೆ. ಹೀಗೊಂದು ಅವಕಾಶ ಕಲ್ಪಸಿಕೊಡುವುದರಿಂದ ಬಹಳ ಮಟ್ಟಿಗೆ ಪಟ್ಟಣಗಳಲ್ಲಿ ವಾಸಮಾಡತಕ್ಕವರೇ ಜಿಲ್ಲಾ ಬೋರ್ಡಿನ ಸದಸ್ಯರುಗಳಾಗಿ ಆರಿಸಿ ಬರಲು ಅವಕಾಶ ಉಂಟಾಗಿ, ತನ್ಮೂಲಕ ಹಳ್ಳಿಗಳ ಅಭಿವೃದ್ಧಿಗೆ ಬಹಳ ಧಕ್ಕೆಯುಂಟಾಗುತ್ತದೆ. ಹೀಗೆ ಈ ಕ್ಲಾಜ್ (2) ಮತ್ತು ಇದರ ಪ್ರಾವಿಸೋ ಒಪ್ಪಿಕೊಂಡರೆ ಇಡಾ ಒಂದು ದೊಡ್ಡ ತೊಂದರೆ ಬಂದು ಈ ಮಸೂದೆಯ ಮೂಲ ತತ್ವಕ್ಕೇ ಧಕ್ಕೆ ಬರುತ್ತದೆ. ಆದ ಕಾರಣ ಇದನ್ನು ತಾವು ಖಂಡಿತ ತೆಗೆದುಹಾಕಬೇಕಾಗಿದೆ. ಈಗಿರತಕ್ಕ ನಿಯಮಾವಳಿ ಪ್ರಕಾರ ಯಾರಾದರೂ ಮುನಿಸಿಪಲ್ ಚುನಾವಣೆಗಳಲ್ಲಿ ಅಥವ ಇತರ ಚುನಾವಣೆಗಳಲ್ಲಿ ತಮ್ಮ ಮತದಾನ ಮಾಡಬೇಕಾಗಿದ್ದರೆ, ಅವರು ಕನಿಷ್ಟಪಕ್ಷ ಆ ಸರಹದ್ದಿನಲ್ಲಿ 180 ದಿವಸಗಳಿಗೆ ಕಮ್ಮಿ ಇಲ್ಲದೆ ವಾಸಮಾಡಿಕೊಂಡಿರಬೇಕೆಂದು ತಿಳಿಸಲಾಗಿದೆ. ಹಾಗೆ ಯಾರು ಆಯಾಯ ಪಂಚಾಯತಿ ಸರಹದ್ದಿನಲ್ಲ ನ್ಯಾಯವಾಗಿ ವಾಸಮಾಡುತ್ತಿಲ್ಲವೋ ಅಂಥವರಿಗೆ ಈ ಮತದಾನದ ಹಕ್ಕು ಬರುವುದಿಲ್ಲ. ಹೀಗಿರುವ ಪ್ರಸಂಗದಲ್ಲಿ ನಾವುಗಳು ಈ ಒಳಕ್ಲಾಜ್ (2)ನ್ನೂ ಮತ್ತು ಅದರ ಪ್ರಾವಿಸೋವನ್ನೂ ಒಪ್ಪಿಕೊಂಡೆವೆಂದರೆ ಮೇಲೆ ಹೇಳಿರತಕ್ಕ ತತ್ವಗಳಿಗೆ ವಿರೋಧವಾಗುವುದೇ ಅಲ್ಲದೆ ನಮ್ಮ ಮೂಲ ಉದ್ದೇಶಕ್ಕೇ ಧಕ್ಕೆ ಬಂದು ಯಾರು ಬೇಕಾದರೂ ಈ ಜಿಲ್ಲಾ ಬೋರ್ಡುಗಳಿಗೆ ಸದಸ್ಯರಾಗಿ ಬರಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಹೀಗೆ ಮಾಡತಕ್ಕದ್ದು ಈ ಸಭೆಯ ಘನತೆ ಗಾಂಭೀರ್ಯಗಳಿಗೆ ಸರಿಯಾದುದಲ್ಲ. ಇದರಲ್ಲಿ ಸೂಚಿಸಿರತಕ್ಕ ಪ್ರಕಾರ ಮೈಸೂರು ಅಥವಾ ಬೆಂಗಳೂರಿನಲ್ಲಿದ್ದು ಕೊಂಡಿರತಕ್ಕ ಯಾರೇ ಆಗಲಿ, ಹಳ್ಳಿಗಳಲ್ಲಿರತಕ್ಕ ಪಂಚಾಯಿತಿಗಳಿಗೆ ಕೇವಲ ಒಂದು ಮೊಹತರ್ಫ ಕೊಡುವುದರ ಆಧಾರದ ಮೇಲೆ ಈ ಅವಕಾಶ ಕೊಡುವುದರಿಂದ, ಕೇವಲ ಪಟ್ಟಣಗಳಲ್ಲರತಕ್ಕವರಿಗೆ ಅನುಕೂಲ ಮಾಡಬೇಕೆಂಬ ಉದ್ದೇಶದಿಂದಲೇ ಇದನ್ನು ಮಾಡಿರುವ ಹಾಗಿದೆ. ಆದಕಾರಣ ಈ ಕ್ಲಾಜ್‌ಗಳನ್ನು ಮನ್ನಾ ಮಾಡಿ, ಈ ಅವಕಾಶವನ್ನು ಸಂಪೂರ್ಣವಾಗಿ ಹಳ್ಳಿಗಳಲ್ಲದ್ದು, ಅಲ್ಲೇ ವಾಸಮಾಡಿಕೊಂಡಿರತಕ್ಕವರಿಗೆ ಕೊಡಬೇಕೆಂಬ ಉದ್ದೇಶದಿಂದ ನಾನು ಈ ತಿದ್ದುಪಡಿಯನ್ನು ತಂದಿದ್ದೇನೆ. ಇದಕ್ಕೆ ಮಾನ್ಯ ಸದಸ್ಯರೆಲ್ಲರೂ ಬೆಂಬಲ ನೀಡಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—Amendment moved :—

"That sub-clause (2) and the proviso to it shall be deleted."

Sri L. SIDDAPPA.—That means, you want a member to be a member of any number of District Boards ?

Sri M. L. NANJARAJ URS.—No.

Sri L. SIDDAPPA.—You want this proviso also to be removed ?

"Provided that no person shall be qualified to be a member of more than one District Board."

Sri M. L. NANJARAJ URS.—ಆ qualification ವಿಚಾರ ಸೆಕ್ಷನ್ 8ರಲ್ಲಿ ತಿಳಿಸಲಾಗಿದೆ. ಹಾಗೆ residential qualification ಇದು ಕಡೆ ಬಂದ ಮೇಲೆ ಮತ್ತೊಂದು ಪಂಚಾಯಿತಿಗೆ ಸದಸ್ಯರಾಗಲು ಅದು ಹೇಗೆ ಸಾಧ್ಯವಾಗುತ್ತದೆ?

*ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಶ್ರೀ ಎಂ. ಎಲ್. ನಂಜರಾಜೇಅರಸು ನವರು ತಂದಿರತಕ್ಕ ತಿದ್ದುಪಡಿಗೆ ಬೆಂಬಲ ಕೊಡತಕ್ಕ ಒಂದೆರಡು ವಿಚಾರಗಳಲ್ಲಿ ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ತಿದ್ದುಪಡಿಯನ್ನು ಹಳ್ಳಿಗಳ ಹಿತರಕ್ಷಣೆ ಮಾಡತಕ್ಕ ದೃಷ್ಟಿಯಿಂದ ತಂದಿರತಕ್ಕದ್ದಾಗಿದೆ. ಪ್ರಜಾನಕರ್ಕಾರ ಜಾರಿಗೆ ಬರುವುದಕ್ಕೆ ಮುಂಚೆ ಈ ಜಿಲ್ಲಾ ಬೋರ್ಡುಗಳ ಮತ್ತು ಗ್ರಾಮ ಪಂಚಾಯಿತಿಗಳ ಬಗ್ಗೆ ಏನೊಂದು ವ್ಯತ್ಯಾಸವಿತ್ತೋ ಅದನ್ನು ಈಗ ಬದಲಾವಣೆಮಾಡಿ, ಅವುಗಳೆರಡೂ ಒಂದ

(SRI M. L. NANJARAJ URS.)

ಕ್ಕೊಂದು ಮಿಳಿತವಾಗಿ, ಎಲ್ಲಾ ಕೆಲಸ ಕಾರ್ಯಗಳಲ್ಲೂ ಚೆನ್ನಾಗಿ ಭಾಗವಹಿಸಿ, ಕೆಲಸ ನಡೆಯಲು ಒಂದು ವಿಕೇಂದ್ರೀಕೃತವಾದ ರಾಜ್ಯಾಂಗವನ್ನು ವ್ಯವಸ್ಥೆ ಮಾಡಬೇಕೆಂಬ ಇರಾದೆಯಿಂದ ಇಂದು ಸರ್ಕಾರದವರು ಈ ಜಿಲ್ಲಾ ಬೋರ್ಡು ಮತ್ತು ಗ್ರಾಮ ಪಂಚಾಯಿತಿಗಳ ಮಸೂದೆಯನ್ನು ಹೊಸದಾಗಿ ತಯಾರಿಸಿ, ಈಗ ಸಭೆಯ ಮುಂದಿಟ್ಟಿದ್ದಾರೆ. ಈ ಮಸೂದೆಯಲ್ಲಿ ಹಳ್ಳಿ ಜನರಿಗೆ ಬೇಕಾದ ಸಕಲ ವಿಷಯಗಳನ್ನು ಅಡಕಮಾಡಲಾಗಿದೆ. ಇಂಥಾ ಒಂದು ಕಾನೂನನ್ನು ಶಾಸನವನ್ನಾಗಿ ಮಾಡಿ, ತನ್ಮೂಲಕ ಹಳ್ಳಿಗಾಡಿನ ಜನರ ಅಭಿವೃದ್ಧಿಗೆ ಅನುಕೂಲವಾಗತಕ್ಕ ಸನ್ನಿವೇಶಗಳನ್ನೊದಗಿಸಿಕೊಟ್ಟಿದ್ದಕ್ಕಾಗಿ ನಾವೆಲ್ಲರೂ ಹೆಮ್ಮೆ ಪಡತಕ್ಕವಿಚಾರ. ಆದರೆ ಈಗ ಈ 55ನೆಯ ಸೆಕ್ಷನ್ ಕ್ಲಾಜ್ (2) ಮತ್ತು ಅದರ ಪ್ರಾವಿಸೊ ಈ ಎರಡನ್ನೂ ಹಾಗೇ ಉಳಿಸಿ, ಅದಕ್ಕೆ ಯಾವ ತಿದ್ದುಪಡಿಯನ್ನೂ ಮಾಡದೆ ಹೋದರೆ ಅದರಿಂದೇನು ತೊಂದರೆಯಾಗುತ್ತದೆಂದರೆ ಜಿಲ್ಲಾ ಕಸಬೆಗಳಲ್ಲಿ ವಾಸಮಾಡ ತ್ತಿರುವ ಜನರು ಈ ಜಿಲ್ಲಾ ಬೋರ್ಡುಗಳಿಗೆ ಚುನಾಯಿತರಾಗಿ ಬಂದು, ಈ ರಾಜಕೀಯ ಕ್ಷೇತ್ರವನ್ನು ಒಂದು ತಮ್ಮ ಹಂಬೆಯಾಗಿ ಮಾಡಿಕೊಂಡು ಹಳ್ಳಿಜನರ ಹಿತವನ್ನು ಕಾಪಾಡುವ ಒಂದು ಸೊಗಿನಲ್ಲಿ, ಯಾವ ಅಂಥ ಉಪಕಾರಗಳನ್ನೂ ಹಳ್ಳಿಗಳಲ್ಲರತಕ್ಕವರಿಗೆ ಕಾರ್ಯತಃ ಮಾಡದೆ ಇರತಕ್ಕದ್ದು ಈಗಾಗಲೇ ಎಲ್ಲರಿಗೂ ಮನದಟ್ಟಾಗಿರತಕ್ಕ ವಿಷಯ. ಆ ಒಂದು ದೃಷ್ಟಿಯಿಂದ ಅಂಥಾ ತೊಂದರೆಯನ್ನು ತಪ್ಪಿಸಬೇಕೆಂಬ ಉದ್ದೇಶದಿಂದಲೇ ಈ 55ನೇ ಸೆಕ್ಷನ್ ಒಳ ಕ್ಲಾಜ್ (2)ನ್ನೂ ಮತ್ತು ಅದರ ಪ್ರಾವಿಸೋವನ್ನೂ ತೆಗೆದುಹಾಕಬೇಕೆಂದು ಈ ತಿದ್ದುಪಡಿಯನ್ನು ಅವರು ತಂದಿರುತ್ತಾರೆ. ಈಗ ಹೊಸದಾಗಿ ಜಾರಿಗೆ ಬರಲಿರುವ ಕಾನೂನು ಪ್ರಕಾರ ಯಾರು ಹಳ್ಳಿಯಲ್ಲೇ ಇದ್ದು ಅಲ್ಲೇ ವಾಸಮಾಡಿಕೊಂಡಿರುತ್ತಾರೋ ಅಂಥಾ ವಾರ್ಡ್‌ಗಳಿಗೆ ಆ ಗ್ರಾಮಪಂಚಾಯಿತಿಗೆ ಸದಸ್ಯರಾಗಿ ಆರಿಸಿ ಬರಲು ಅವಕಾಶವಿದೆ. ಹಾಗೆ ಅಲ್ಲಿಗೆ ಸದಸ್ಯರಾದಂಥವರೇ ಆಯಾಯ ಜಿಲ್ಲೆಯ ಜಿಲ್ಲಾ ಬೋರ್ಡಿಗೆ ಸದಸ್ಯರಾಗಲು ಅವಕಾಶವಿರುತ್ತದೆಯೇ ಶಿವಾಯಿ ಬೇರೆ ಎಲ್ಲೋ ಪಟ್ಟಣಗಳಲ್ಲಿ ವಾಸಮಾಡಿಕೊಂಡಿದ್ದು ಈ ಜಿಲ್ಲಾ ಬೋರ್ಡಿಗೆ ಸದಸ್ಯರಾಗಬೇಕೆಂಬುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಹೀಗೆ ಈ ಒಂದು qualification ವಿನಾ ಮತ್ತೆ ಯಾವ qualification ಇದ್ದರೂ ಅದು ಸಾಧ್ಯವಾಗುವುದಿಲ್ಲ.

ಈ ತಿದ್ದುಪಡಿಯಿಂದ ಹಳ್ಳಿಗಾಡಿನಲ್ಲಿರುವ ಅನುಭವಿಗಳಿಗೂ ಮತ್ತು ಜನ ಸೇವೆ ಮಾಡಬೇಕೆಂದಿರುವವರಿಗೂ ಮತ್ತು ಇನ್ನೂ ಅನೇಕ ಜನರಿಗೂ ಒಂದು ಅವಕಾಶ ಸಿಕ್ಕಿ ಹೆಚ್ಚು ಹೈಪೋಟಿಯಿಲ್ಲದೆ ಸುಲಭವಾಗಿ ಸ್ಥಳೀಯ ಸಂಸ್ಥೆಗಳಿಗೆ ಬಂದು ಸೇವೆ ಸಲ್ಲಿಸುವುದಕ್ಕೆ ಅನುಕೂಲವಾಗುತ್ತದೆ. ಹಳ್ಳಿಗಳು ಉದ್ಧಾರವಾಗಬೇಕೆಂದು ಹೇಳುತ್ತಿರುವಾಗ ವಿದ್ಯಾವಂತರು ಪಟ್ಟಣ ಸೇರಿ ಅಧಿಕಾರವ್ಯಾಮೋಹದಿಂದ ಹಳ್ಳಿಯನ್ನು ಮರೆತಿದ್ದಾರೆ. ಹಳ್ಳಿಗಳ ಉದ್ಧಾರಕ್ಕಾಗಿ ಎಷ್ಟೋ ಪ್ರಯತ್ನ ಪಟ್ಟಿದ್ದರೂ ಅದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ನಿಜವಾಗಿಯೂ ನಾವು ಯಾವ ಉದ್ದೇಶದಿಂದ ಸ್ವಾತಂತ್ರ್ಯಗಳಿಸಿದ್ದೇವೋ ಮತ್ತು ಗಾಂಧೀಜಿಯವರು ಯಾವ ತತ್ವವನ್ನು ಹಾಕಿಕೊಟ್ಟಿದ್ದಾರೋ ಅದನ್ನು ಕಾರ್ಯಗತಮಾಡುವುದು ಮತ್ತು ಅದಕ್ಕೆ ಬೆಂಬಲಕೊಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಈ ಒಂದು ತಿದ್ದುಪಡಿಯನ್ನು ಒಪ್ಪಿದರೆ ನಿಜವಾಗಿ ಸ್ಥಳೀಯ ಸಂಸ್ಥೆಗಳು ಯಾವ ರೀತಿ ಕೆಲಸ ಮಾಡಿಕೊಂಡು ಹೋಗಬಹುದೋ ಅದಕ್ಕೆ ಸರಿಯಾದ ಪ್ರಾಮುಖ್ಯತೆ ಕೊಟ್ಟಹಾಗಾಗುತ್ತದೆ.

ಮೂರನೆಯದಾಗಿ ಸಾಧ್ಯವಾದಮಟ್ಟಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಯಾವ ರಾಜಕೀಯ ಪಂಗಡಕ್ಕೂ ಸೇರದೆ ನಿಜವಾಗಿ ಜನರ ಪ್ರತಿನಿಧಿಗಳಾಗಿರುವವರು, ಹಳ್ಳಿಗಾಡಿನವರ ಉದ್ಧಾರವಾಗಬೇಕೆಂಬ ಅಭಿಪ್ರಾಯವುಳ್ಳ ಜನರು ಬಂದು ಭಾಗವಹಿಸಿದರೆ ಸ್ಥಳೀಯ ಸಂಸ್ಥೆಗಳು ಚೆನ್ನಾಗಿ ಕೆಲಸಮಾಡುವುದಕ್ಕೆ ಅನುಕೂಲವಾಗುತ್ತದೆ. ಪ್ರಜಾ ಪ್ರಭುತ್ವ ಬಂದ ಮೇಲೆ ಕಾಂಗ್ರೆಸ್ ಒಂದು ರಾಜಕೀಯ ಪಕ್ಷವೆಂದು ಮಾಡಿಕೊಂಡು ಕೆಲಸ ನಡೆಯುತ್ತಿರುವುದು ಗೊತ್ತಿರುವ ವಿಚಾರ. ಈ ಶಾಸನ ಸಭೆಗಳು ಉತ್ತಮ ದರ್ಜೆಯ ರಾಜಕೀಯ ಸಂಸ್ಥೆಗಳಾಗಿರಬೇಕೇ ಹೊರತು ಸ್ಥಳೀಯ ಸಂಸ್ಥೆಗಳಾದ ಮುನಿಸಿಪಾಲಿಟಿಗಳು, ಜಿಲ್ಲಾ ಬೋರ್ಡುಗಳು, ಗ್ರಾಮ ಪಂಚಾಯಿತಿಗಳು ಸಾಧ್ಯವಾದಮಟ್ಟಿಗೂ ರಾಜಕೀಯಕ್ಕೊಳಗಾಗಿರಬಾರದು. ಅವು ರಾಜಕೀಯಕ್ಕೆ ಹೊರಗಾಗಿದ್ದೂ ಆಯಾ ಸ್ಥಳಗಳಲ್ಲಿರುವ ಜನರ ಉದ್ಧಾರಕ್ಕೆ ಆಯಾ ಸ್ಥಳಗಳ ಅಭಿವೃದ್ಧಿಗೆ ಕಾರಣವಾಗಿರಬೇಕು. ಆಯಾ ಸ್ಥಳಗಳ ಜನರು ಈ ಸ್ಥಳೀಯ ಸಂಸ್ಥೆಗಳಿಗೆ ಬಂದು ಸೇವೆ ಮಾಡುವುದಕ್ಕೆ ಅವಕಾಶವಿರಬೇಕು. ರೆಸಿಡೆನ್ಷಿಯಲ್ ಕ್ವ್ಯಾಲಿಫಿಕೇಷನ್ ಒತ್ತಾಯಮಾಡುವುದರಿಂದ ಆ ಅರ್ಹತೆಯುಳ್ಳ ಜನರು ಚುನಾಯಿತರಾಗುವುದಕ್ಕೆ ಅವಕಾಶವಿದೆ. ಈ ತಿದ್ದುಪಡಿಯನ್ನು ಒಪ್ಪದಿದ್ದರೆ ಯಾವ ಉದ್ದೇಶದಿಂದ ೨೯ಸಾವಿರ ಪ್ರಜಾಸಂಖ್ಯೆಯಿರುವ ಮೂರು ನಾಲ್ಕು ಗ್ರಾಮಗಳನ್ನು ಸೇರಿಸಿ ಪಂಚಾಯಿತಿಮಾಡಿ ಆ ಪಂಚಾಯಿತಿಯಲ್ಲಿ ಒಂದು ರೀತಿಯಲ್ಲಿ ಚುನಾವಣೆ ನಡೆಸಿ ಹೆಚ್ಚು ಅಧಿಕಾರಗಳನ್ನು ಕೊಟ್ಟು ಗ್ರಾಮ ಪಂಚಾಯಿತಿ ಕೌನ್ಸಿಲ್ ಮಾಡಿ 12½% ರೆವೆನ್ಯೂ ಕೊಟ್ಟು ಯಾವ ಉದ್ದೇಶದಿಂದ ಹಳ್ಳಿಗಾಡಿನ ಜನರ ಉದ್ಧಾರವಾಗಬೇಕು, ಅಧಿಕಾರಗಳು ವಿಕೇಂದ್ರೀಕರಣವಾಗಬೇಕು ಎಂದು ಕಾನೂನು ಮಾಡಿದ್ದೇವೆಯೋ ಅದು ಸಂಪೂರ್ಣವಾಗಿ ಫಲಕಾರಿಯಾಗಲಾರದು. ಚರಿತ್ರೆಯಲ್ಲಿ ನೋಡಿದರೆ ವಿಲೇಜ್ ರಿಪಬ್ಲಿಕ್ಸ್ ಎಂದು ಹಿಂದೆ ಇದ್ದದ್ದು ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿತ್ತು ಎಂಬುದು ಗೊತ್ತಾಗುತ್ತದೆ. ಹಿಂದೆ ಹೆಚ್ಚು ಸಂಪಾದನೆ ಮಾಡುತ್ತಿದ್ದುದು ನಷ್ಟವಾಗುತ್ತಿದೆ ಎಂದು ಅನುಮಾನ ಬರುತ್ತಿದೆ. ಈ ಸದುದ್ದೇಶದಿಂದ ವಿಲೇಜ್ ರಿಪಬ್ಲಿಕ್ಸ್ ಮಾಡಬೇಕೆಂದು ಉದ್ದೇಶಪಟ್ಟಿದ್ದೇವೆ. ಆದರೆ ಮುಂದೆ ಆ ತತ್ವವನ್ನು ಮರೆತೆವು. ಗ್ರಾಮಪಂಚಾಯಿತಿ ಮಾಡುವಾಗ ಅನುಸರಿಸುವ ನೀತಿಯನ್ನು ಜಿಲ್ಲಾ ಬೋರ್ಡು ಬಂದಾಗ ಮರೆತಿದ್ದೇವೆ. ಏಕೆಂದರೆ ಅನೇಕ ಜನರು ಅನಿವಾರ್ಯವಾಗಿ ಬೇರೆ ಕಡೆ ಹೋಗುವುದಕ್ಕೆ ಅವಕಾಶ ಕಲ್ಪಿಸಿ ವ್ಯವಹಾರ ಮಾಡುತ್ತಿದ್ದಾರೆ. ಇದರಿಂದ ಬುಡಕ್ಕೆ ಕೊಡಲಿ ಪೆಟ್ಟು ಬಿದ್ದಹಾಗಾಗಿದೆ. ಪಿರಮಿಡಿಕಲ್ ಸ್ಟ್ರಕ್ಚರ್ ಎಂಬಂಶೆ ಒಂದು ಮಾದರಿ ರಾಜ್ಯಾಂಗ ರಚಿಸಿದ್ದೇವೆ. ಅದರ ಪ್ರಕಾರ ಹಳ್ಳಿಗಳನ್ನು ಸೇರಿಸಿ ಪಂಚಾಯಿತಿ ಮಾಡುತ್ತಿದೆ. ರಷ್ಯಾ ದೇಶದಲ್ಲೂ ಪಿರಮಿಡಿಕಲ್ ಸ್ಟ್ರಕ್ಚರ್‌ನಂಥ ರಾಜ್ಯಾಂಗ ವಿದೆ. ಮಹಾತ್ಮಗಾಂಧಿಯವರು, ಅಗರವಾಲಾರವರು ಸೂಚಿಸಿರುವ ರಾಜ್ಯಾಂಗವನ್ನು ರಚಿಸುವುದು ಒಳ್ಳೆಯದೆಂದು ಅಭಿಪ್ರಾಯಪಟ್ಟಿರುತ್ತಾರೆ. ಅದು ನಿಜವಾಗಿಯೂ ಜನರಿಗೆ ಅನುಕೂಲವಾಗತಕ್ಕದ್ದು. ಲೂಯಿ ಫಿಷರ್‌ರವರು ಬಂದು ರಷ್ಯಾ ಮಾದರಿಯ ರಾಜ್ಯಾಂಗವನ್ನು ಅನುಸರಿಸುತ್ತೀರಾ ಎಂದು ಮಹಾತ್ಮಗಾಂಧಿಯವರನ್ನು ಕೇಳಿದಾಗ ರಷ್ಯಾ ಆಗಲಿ ಅಥವಾ ಬೇರೆ ಯಾವ ದೇಶವೇ ಆಗಲಿ ಜನರಿಗೆ ಸರಿಯಾದ ಅನುಕೂಲ

ವಾಗಬೇಕು, ಹಿಂದೂಸ್ಥಾನ ಹಳ್ಳಿಗಾಡಿನದೇಶವಾದ್ದರಿಂದ ಅಲ್ಲಿನವರಿಗೆ ಸರ್ವತ್ತೋಮುಖವಾದ ಅಭಿವೃದ್ಧಿಯಾಗಬೇಕಾದರೆ ಆ ರೀತಿಯ ಕಾನೂನು ಮಾಡಬೇಕಾದ್ದೂ ಅತ್ಯಾವಶ್ಯಕ ಎಂದು ಅಪ್ಪಣೆ ಕೊಟ್ಟರು. ಅವರ ಉದ್ದೇಶ ಕೂಡ ಸಾಧ್ಯವಾದಷ್ಟು ಅಧಿಕಾರಿಗಳು ಹಂಚಿಕೆಯಾಗಿ ಜನರು ನೇರವಾಗಿ ಪ್ರಭಾವ ಬೀರುವುದಕ್ಕೆ ಸಾಧ್ಯವಾದರೆ ಮಾತ್ರ ಈ ಶಾಸನದಿಂದ ಜನರಿಗೆ ಅನುಕೂಲವಾಗುತ್ತದೆ ಎಂಬುದು.

ಮತ್ತೊಂದು ವಿಚಾರ. ಕಾನೂನು ಮಾಡುವಾಗ ಯಾವಾಗಲೂ ಜನರ ಒಂದು ನಾಗರೀಕತೆ, ಸಂಸ್ಕೃತಿ ಎಷ್ಟುಮಟ್ಟಿಗೆ ಬೆಳೆದಿದೆಯೋ ಅದಕ್ಕನುಸಾರವಾಗಿ ಮಾಡಬೇಕು. ಜನರ ಸಂಸ್ಕೃತಿಗನುಸಾರವಾಗಿ ರಾಜ್ಯಾಂಗರಚಿಸಬೇಕು. ಹಾಗಿಲ್ಲದೆ ಯಾವುದೋ ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ಇದು ಸರಿಯಲ್ಲ, ಇದು ಕಾರ್ಯರೂಪಕ್ಕೆ ಬರುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಹಳ್ಳಿಗಾಡಿನ ದೇಶದಲ್ಲಿ ಒಂದು ವಿಕೇಂದ್ರೀಕೃತವಾದ ರಾಜ್ಯಾಂಗವನ್ನು ಜಾರಿಗೆ ತಂದು ಹಳ್ಳಿಗಳಲ್ಲಿರುವ ಜನರು ಪಂಚಾಯಿತಿಗೆ ಬರುವ ಹಾಗೆ, ಜಿಲ್ಲಾ ಬೋರ್ಡಿಗೆ ಬರುವ ಹಾಗೆ ಒಂದು ಅವಕಾಶ ಏರಬೇಕು. ಆ ಉದ್ದೇಶವು ಈ ತಿದ್ದುಪಡಿಯಲ್ಲಿ ಸೂಚಿತವಾಗಿದೆ. ಇದರಲ್ಲಿ ವಿರೋಧಿಸುವ ಕೆಲವರು ಒಂದು ಅಭಿಪ್ರಾಯ ಪಡಬಹುದು. ಹಳ್ಳಿಗಾಡಿನಲ್ಲಿ ಜಿಲ್ಲಾ ಬೋರ್ಡಿನಲ್ಲಿ ಕೆಲಸಮಾಡುವಂಥ ವಿದ್ಯಾವಂತರಿರುವುದಿಲ್ಲ. ಅಲ್ಲರುವವರು ಪೂಟ್‌ಲಾಯರುಗಳ ಕೈಗೆ ಸಿಕ್ಕಿ ಹಾಳಾಗಬಹುದು. ಆದ್ದರಿಂದ ವಿರೋಧಪಕ್ಷಗಳು ಮತ್ತು ವಿದ್ಯಾವಂತರು ಪಟ್ಟಣಗಳಲ್ಲಿದ್ದಾರೆ. ಅಂಥವರಿಗೆ ಅವಕಾಶಕೊಟ್ಟರೆ ತೊಂದರೆಯಾಗುತ್ತದೆ ಎಂದು ವಾದ ಹೂಡಬಹುದು. ಆದರೆ ಅದು ಕೃತ್ರಿಮವಾದ ಪ್ರತಿಯೊಂದನ್ನೂ ಪ್ರಯೋಗಮಾಡಿ ಕುಂದುಕೊರತೆಗಳನ್ನು ನೋಡಿ ಅನುಭವದ ಮೇಲೆ ಕೆಲಸ ಮಾಡಬೇಕೇ ಹೊರತು ಕಾರ್ಯರೂಪಕ್ಕೆ ಬರುವುದಕ್ಕೆ ಮುಂಚೆ ಆ ಅನುಭವ ಹೇಗೆಬರುತ್ತದೆ! ಅದರ ಪರಿಣಾಮವೇನಾಗಬಹುದು ಎಂದು ಭಾವಿಸುವುದು ಸೂಕ್ತವಲ್ಲ. ಹಳ್ಳಿಗಾಡಿನಲ್ಲಿ ಚೆನ್ನಾಗಿ ಚಾಕಚಕ್ಯತೆಯಿಂದ ವ್ಯವಹಾರ ನಡೆಸುವವರೂ ಮತ್ತು ಕಾರ್ಮಿಕರಿಸಿನಿಂದ ಕೆಲಸ ಮಾಡುವವರೂ ಬೇಕಾದಷ್ಟು ಮಂದಿ ಇದ್ದಾರೆ. ಇದರ ಜೊತೆಗೆ ಹಳ್ಳಿಗಾಡಿನ ಹಿತದೃಷ್ಟಿಯಿಂದ ಕೆಲಸಮಾಡುವ ಧರ್ಮಬುದ್ಧಿಯೂ ಬೇಕಾದಷ್ಟು ಅವರಲ್ಲಿದೆ. ಉದಾಹರಣೆಗೆ ಮೈಸೂರು ಜಿಲ್ಲಾ ಬೋರ್ಡಿನ ಅಧ್ಯಕ್ಷರು ಹಳ್ಳಿಗಾಡಿನಲ್ಲಿ ಪ್ರವಾಸ ಹೋದಾಗ ಐದಾರುಲಕ್ಷ ರೂಪಾಯಿಗಳನ್ನು ಧರ್ಮಕಾರ್ಯಗಳಿಗಾಗಿ ಕೊಡುವುದಾಗಿ ಜನರು ಹೇಳಿದ್ದಾರೆ. ಗುಂಡ್ಲುಪೇಟೆ ತಾಲ್ಲೂಕು ಒಂದರಲ್ಲೇ 20ರಿಂದ 50 ಸಾವಿರ ರೂಪಾಯಿಗಳವರೆಗೆ ದಾನಮಾಡಿ ಹಳ್ಳಿಗಾಡಿನ ಪ್ರಗತಿಯನ್ನು ಸಾಧಿಸಿದ್ದಾರೆ. ಹೀಗೆ ಕೆಲಸಮಾಡುವುದು ಮನುಷ್ಯನ ಕರ್ತವ್ಯ. ಹಾಗೆಮಾಡಿ ತೋರಿಸಬೇಕೇ ವಿನಾ ಬರೀ ಬಾಯಲ್ಲಿ ಮಾತನಾಡಿ ಹೇಳುವುದರಿಂದ ಪ್ರಯೋಜನ ವಿಲ್ಲ. ಹೇಗಾದರೂ ಹಳ್ಳಿಗಾಡಿನ ಪ್ರಜೆಗಳಲ್ಲಿ ಧರ್ಮಬುದ್ಧಿಯಿದೆ; ಹಳ್ಳಿಗಳು ಉದ್ಧಾರವಾಗಬೇಕು, ಬೆಳೆಯಬೇಕು ಎಂಬ ಆಸೆಯಿದೆ. ಹಳ್ಳಿಗಳನ್ನು ಉದ್ಧಾರ ಮಾಡಬೇಕೆಂದಿದ್ದರೆ ಎಲ್ಲಾ ಕೇಂದ್ರೀಕೃತಮಾಡಿ ಒಂದು ತರಹ ಸ್ವಾರ್ಥಮನೋಭಾವದಿಂದ ಕೆಲಸ ಮಾಡುತ್ತಿದ್ದಾರೆಂದು ಸರ್ಕಾರದ ಮೇಲೆ ಆರೋಪ ಮಾಡಿರುತ್ತಾರೆ. ಆದ್ದರಿಂದ ಉದಾರ ಮನಸ್ಸಿನಿಂದ ಹಳ್ಳಿಗಾಡಿನ ಜನರನ್ನು ರಾಜಕೀಯದಿಂದ ದೂರ ವಾಗಿಟ್ಟು ಪ್ರಭಾವಶಾಲಿಗಳು ಮತ್ತು ಯೋಗ್ಯರು ಜಿಲ್ಲಾ ಬೋರ್ಡಿನಲ್ಲಿ ಬಂದು ಕೆಲಸಮಾಡುವುದಕ್ಕೆ ಅವಕಾಶಕೊಟ್ಟರೆ ನಿಜವಾಗಿಯೂ ಯಾವ ಸದುದ್ದೇಶದಿಂದ ಈ ಮಸೂದೆಯನ್ನು ತಂದಿದೆಯೋ ಅದು ಸಾರ್ಥಕವಾಗುತ್ತದೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಮೈಸೂರು ಮಾದರಿ ಮೈಸೂರಾಗಿ ಆದರ್ಶ ರಾಜ್ಯವಾಗಿ ಇಡೀ ಭರತಖಂಡಕ್ಕೇ ಮಾದರಿಯಾದ ರಾಜ್ಯವಾಗುವುದಕ್ಕೆ ಸಹಾಯವಾಗುತ್ತದೆ.

ಇನ್ನೊಂದು ಮಾತು. ಹಿಂದೂಸ್ಥಾನದ ರಾಜ್ಯಾಂಗದಲ್ಲಿ ಪಿರಮಿಡಿಕಲ್‌ಸ್ಟ್ರಕ್ಚರ್‌ನಂಥ ಅಥವಾ ಡೀಸೆಂಟ್ರಲೈಜೇಷ್ನ್ ಮಾಡುವಂಥ ಕ್ಲಾಜು ಹಾಕಿಲ್ಲ. ನಾವು ರಾಜ್ಯಾಂಗ ಸಭೆಯನ್ನು ಮಾಡಿದ್ದಾಗ ಈ ವಿಷಯವನ್ನು ಸೇರಿಸಿದ್ದೆವು. ಆದರೆ ರಾಜಕೀಯ ಕಾರಣಗಳಿಂದ ನಮ್ಮದೇ ಆದ ಒಂದು ರಾಜ್ಯಾಂಗವನ್ನು ಮಾಡುವುದಕ್ಕೆ ಅವಕಾಶಕೊಡಲಿಲ್ಲ. ಏನೇ ಆಗಲಿ ಈ ರೀತಿ ಹಳ್ಳಿಗಳನ್ನು ಉದ್ಧಾರಮಾಡುವುದಕ್ಕೆ, ಹಳ್ಳಿಗಳಿಗೆ ಪ್ರೋತ್ಸಾಹ ಕೊಡುವುದಕ್ಕೆ ಅನುಕೂಲವಾಗುವಂಥ ಒಂದು ಸೆಕ್ಷನ್ ಹಾಕಿದ್ದೆವು. ಅದೇನು ತೋರಿಸುತ್ತದೆಯೆಂದರೆ ಮೈಸೂರಿನ ಜನರಿಗೆ ಹಳ್ಳಿಗಳ ಕಡೆ ಹೆಚ್ಚು ನಿಗಾ ಇದೆ ಎಂಬುದು. ಇದು ಈ ಜಿಲ್ಲಾ ಬೋರ್ಡು ಮಸೂದೆಯಿಂದ ಅರ್ಥವಾಗುತ್ತದೆ. ಆದರೆ ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ತಂದಿರುವಂತೆ ಉದಾರಮನಸ್ಸಿನಿಂದ ಈ ಒಂದು ತಿದ್ದುಪಡಿಯನ್ನು ಒಪ್ಪಿಕೊಂಡರೆ ಇದರಿಂದ ನಿಜವಾಗಿಯೂ ಮೈಸೂರಿನ 75 ಲಕ್ಷ ಜನರ ಹಿತ ಕಾಪಾಡಿದ ಹಾಗಾಗುತ್ತದೆ. ಆದ್ದರಿಂದ ಹಾಗೆ ಮಾಡಬೇಕು ಎಂದು ವಿನಯಪೂರ್ವಕವಾಗಿ ಸೂಚನೆ ಕೊಡುತ್ತಾ, ಶ್ರೀ ನಂಜರಾಜ ಅರಸ್ ರವರು ತಂದಿರುವ ತಿದ್ದುಪಡಿಗೆ ಬೆಂಬಲ ಕೊಡುತ್ತೇನೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎಷ್ಟು ಹೊತ್ತಿನತನಕ ನಾವು ಸಭೆ ಮುಂದುವರಿಸಬೇಕೆಂದಿದೆ?

ಅಧ್ಯಕ್ಷರು.—12 ಘಂಟೆವರೆಗೆ ಎಂದಿತ್ತು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನನ್ನ ಒಂದು ಸಲಹೆ ಇದೆ. ಅದನ್ನು ತಾವೂ ಅಂಗೀಕರಿಸಿ, ಸಭೆಯವರೂ ಅಂಗೀಕರಿಸಿದರೆ ಚೆನ್ನಾಗಿರುತ್ತದೆಂದು ಕಾಣುತ್ತದೆ. ಈಗ ಯಾವ ಒಂದು ತಿದ್ದುಪಡಿಬಂದಿದೆಯೋ ಅದು ಬಹಳ ಮುಖ್ಯವಾದದ್ದು. ನಾವು ಸಭೆಯನ್ನು ಅರ್ಧಘಂಟೆ ಅಥವಾ ಒಂದುಘಂಟೆ ಮುಂದುವರಿಸಿ ಅದನ್ನು ಇತ್ಯರ್ಥ ಮಾಡುವಂತಹ ವಿಷಯ ಅದಲ್ಲ. ಇನ್ನೂ ಬಹಳ ಚೆನ್ನಾಗಿ ಚರ್ಚೆಯಾಗಿ, ಅದರ ಸಾಧಕ ಬಾಧಕಗಳನ್ನು ವಿಚಾರಮಾಡಿ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದೆಂದು ನನಗೆ ತೋರುತ್ತದೆ. ಆದ್ದರಿಂದ ಈ ವಿಚಾರದಲ್ಲಿ ನನ್ನ ಸಲಹೆ ಇಷ್ಟೆ. ಬಹಳ ಮುಖ್ಯವಾದ ಅನೇಕ ವಿಚಾರಗಳು ಈಗಾಗಲೇ ತೀರ್ಮಾನವಾಗಿದೆ. ಸರ್ಕಾರದವರು ಆ ವಿಚಾರದಲ್ಲಿ ಮುಂದಿನ ಕ್ರಮ ತೆಗೆದುಕೊಳ್ಳಬಹುದು. ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯನ್ನು ಹೌಸಸ್ ಆಫ್ ದಿ ಲೆಜಿಸ್ಲೇಚರ್‌ಗೆ ಸಾರ್ವತ್ರಿಕ ಚುನಾವಣೆ ಆದ ಮೇಲೆ ತೆಗೆದುಕೊಳ್ಳಬೇಕಾಗುತ್ತದೆಯೇ ಹೊರತು ಅದಕ್ಕೆ ಪೂರ್ವಭಾವಿಯಾಗಿ ಆಗುವುದಿಲ್ಲ.

Sri L SIDDAPPA.—You take power to extend it by one year.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು. ನಾನು ಹೇಳುವುದು ಕೇಳಿ. ಒಂದು ವರ್ಷ ಅಂತ ಅಧಿಕಾರ ತೆಗೆದುಕೊಂಡಿದ್ದೆವು. ಈಗ ಸದ್ಯಕ್ಕೆ 6 ತಿಂಗಳಿಗೆ ಅಂತ ಮಾಡಿದ್ದೇವೆ. ಅದನ್ನು ಮುಂದುವರಿಸುವುದಕ್ಕೆ ನಮಗೆ ಅಧಿಕಾರವಿದೆ ಎಂದು ಹೇಳುತ್ತ ಇದ್ದೇನೆಯೇ

(SRI L. SIDDAPPA.)

ಹೊರತು ಇನ್ನೇನೂ ಅಲ್ಲ. ಆದ್ದರಿಂದ ಈ ಚುನಾವಣೆ ಆಗಬೇಕಾದರೆ ಸಾಧಾರಣವಾಗಿ ಸಾರ್ವತ್ರಿಕ ಚುನಾವಣೆ ಆದ ಮೇಲೆ ಆಗುತ್ತದೆ ಎಂದು ತೋರುತ್ತದೆ. ನಾವು ಪುನಃ Monsoon Session ನನ್ನು ಆಗಸ್ಟ್ ಅಥವಾ ಸೆಪ್ಟೆಂಬರ್‌ನಲ್ಲಿ ಇಟ್ಟುಕೊಂಡು ಯೂನಿವರ್ಸಿಟಿ ಬಿಲ್ಲು, ಜೆನೆನ್‌ಸಿ ಬಿಲ್ಲು ಇವನ್ನೆಲ್ಲಾ ಪರಿಶೀಲನೆ ಮಾಡಬೇಕಾಗುತ್ತದೆ. ಆದ್ದರಿಂದ ಆಗ ಈ ವಿಚಾರ ಇತ್ಯರ್ಥ ಮಾಡಬಹುದು ಎಂದರೆ ಬಹುಶಃ ಎಲ್ಲರೂ ಒಮ್ಮತವಾಗಿ ಈ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬರಬಹುದೆಂದು ಕಾಣುತ್ತದೆ.

ಶ್ರೀ ಬಿ. ಚೆನ್ನಬ್ಯೆರೇಗೌಡರು.—ಶ್ರೀ ಸಿದ್ದಪ್ಪನವರು ಮೊನ್ನೆದಿನ ಕೇಳಿದ್ದಕ್ಕೆ ಜನರಲ್ ಎಲೆಕ್ಷನ್‌ಗೆ ಮೊದಲೇ ಡಿಸ್ಟ್ರಿಕ್ಟ್ ಬೋರ್ಡ್ ಎಲೆಕ್ಷನ್ ಮಾಡುತ್ತೇವೆ ಎಂದು ಹೇಳಿದ್ದರು. ಈಗ.....

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮೊದಲೇ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇಲ್ಲದಿದ್ದರೆ ಜನರಲ್ ಎಲೆಕ್ಷನ್ ಜೊತೆಯಲ್ಲೇ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದು ಯಾವುದೂ ಆಗದಿದ್ದರೆ ಆಮೇಲೆ ಮಾಡಬೇಕಾಗುತ್ತದೆ ಎಂದು ಹೇಳಿದರು ಅಷ್ಟೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು. – ಎಲ್ಲಾ ಅನುಕೂಲವಾದಲ್ಲಿ ಮುಂಚೆ ಆದರೆ ಮುಂಚೆಯೇ ಮಾಡೋಣ. ಆದಷ್ಟು ಜಾಗ್ರತೆ ಮುಗಿಸಬೇಕು.

ಶ್ರೀ ಎಲ್. ಸಿದ್ದಪ್ಪನವರು.—ಈಗತಾನೆ ಮಾನ್ಯ ಮಂತ್ರಿಗಳು ಹೇಳಿದ್ದು ಬಹಳ ಆಶ್ಚರ್ಯವಾಗಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—12 ಘಂಟೆ ಆದದ್ದು ಆಶ್ಚರ್ಯವೇ!

ಶ್ರೀ ಎಲ್. ಸಿದ್ದಪ್ಪನವರು.—12 ಘಂಟೆ ಆದದ್ದು ಆಶ್ಚರ್ಯವಲ್ಲ 12 ಘಂಟೆ ಆದಮೇಲೆ ಪುನಃ 2 ಘಂಟೆಗೆ, 8 ಘಂಟೆಗೆ ಸಭೆ ಕರೆತುಕೊಂಡಿರುವ ನಿದರ್ಶನ ಇದೆ. ಇದು ಬಹಳ ಸಣ್ಣ ತಿದ್ದುಪಡಿ. ಇದನ್ನು ಮಂದಿನ ಅಧಿವೇಶನದಲ್ಲಿ ತೀರ್ಮಾನ ಮಾಡೋಣ ಎಂದರೆ ಬಹಳ ಆಶ್ಚರ್ಯವಾಗುತ್ತದೆ. ಈ ರೀತಿ ಮಾಡುವುದು ಅನಾವಶ್ಯಕ. ಆದ್ದರಿಂದ ಈಗಲೇ ತೀರ್ಮಾನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಇದು ಅಷ್ಟು ಸಣ್ಣವಿಷಯವಲ್ಲ. ಚರ್ಚೆ ಮಾಡಬೇಕೆಂದರೆ ಚರ್ಚೆ ಮಾಡೋಣ. ಘಂಟೆಗಟ್ಟಲೆ, ದಿವಸಗಟ್ಟಲೆ ಆಗುತ್ತದೆ. ಆದ್ದರಿಂದ ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗುತ್ತದೆ.

Sri L. SIDDAPPA.—Obstructive tactics.

Sri H. M. CHANNABASAPPA.—It is not a question of obstructive tactics. It involves the fundamentals.

*ಶ್ರೀ ಟಿ. ಸುಬ್ರಹ್ಮಣ್ಯರವರು (ತುಮಕೂರು ಜಿಲ್ಲೆ).—ಇದು ಫ್ರಾಂಚೈಸ್‌ಗೆ ಸಂಬಂಧಪಟ್ಟವಿಷಯ. ಒಬ್ಬೊಬ್ಬರ ಅಭಿಪ್ರಾಯ ಒಂದೊಂದು ರೀತಿಯಲ್ಲಿರುತ್ತದೆ. ಇದು ಒಬ್ಬನಿಗೆ ಇರತಕ್ಕ ಹಕ್ಕಿನ ವಿಷಯವಾದ್ದರಿಂದ ಸುಮ್ಮನೆ ಗಲಾಟೆಯಲ್ಲಿ ಒಂದು ನಿಮಿಷದಲ್ಲಿ ತೀರ್ಮಾನ ಮಾಡುವುದಕ್ಕೆ ಬದಲು.....

Sri L. SIDDAPPA.—I am afraid there is something deeper in it than.....

The Hon'ble Sri H. C. DASAPPA.—When there is an amendment, it has got to be considered. There is nothing deeper than that.

Sri L. SIDDAPPA.—We have considered hundreds of amendments.

Sri T. SUBRAMANYA.—It is a very important question which requires great deliberation, serious thinking, and deep thought. Therefore I accept the suggestion of the Hon'ble Minister that this matter may be taken up at the next session. Nothing will be lost. If we want to hold the elections in November, it may be ready. The preliminaries may be gone through and if it is to be posted to January, nothing will be lost. My submission is that we can accept, with benefit, the suggestion made by the Hon'ble Finance Minister to take it up at the next session.

ಶ್ರೀ ಬಿ. ಹುಚ್ಚೇಗೌಡರು.—ಮೊದಲನಿಂದ ಕೊನೆಯವರೆಗೂ, ಪೆಡ್ಯೂಲ್‌ಗಳೂ ಸಹ ತೀರ್ಮಾನವಾಗಿದೆ. ಇದು ಒಂದು ಮಾತ್ರ ಕೊನೆಯದಾಗಿ ಉಳಿದುಕೊಂಡಿದೆ. ಇದನ್ನು ಈಗ ತೀರ್ಮಾನ ಮಾಡಬೇಕಾಗಿಲ್ಲ, ಮುಂದುವರಿಸೋಣ ಎಂದು ಹೇಳಬೇಕಾದರೆ ತಮ್ಮ ಉದ್ದೇಶವಾದರೂ ಏನು? ಎಲ್ಲಾ ಮುಗಿದಿದೆ. Practically everything is over. ನೂರಾರು ತಿದ್ದುಪಡಿಗಳು ಬಂದು ಅವೆಲ್ಲವೂ ಇತ್ಯರ್ಥವಾಗಿರುವಾಗ ಈ ಒಂದು ತಿದ್ದುಪಡಿಯನ್ನು ತೀರ್ಮಾನ ಮಾಡಲು ಮುಂದಿನ ಒಂದು ಅಧಿವೇಶನಕ್ಕೆ ಹಾಕುವುದು ನ್ಯಾಯವಲ್ಲ.

The Hon'ble Sri H. C. DASAPPA.—I would leave it to the House.

Mr. SPEAKER.—Is the House agreeable to the suggestion made by the Hon'ble Finance Minister?

(Several Members.—Yes.)

Sri L. SIDDAPPA.—No.

The suggestion to postpone further consideration of the clause at the next session was approved by a majority).

———

Prorogation of the Session.

Mr. SPEAKER. (The Hon'ble Sri V. Venkatappa).—The following is the notification proroguing the session.

NOTIFICATION.

In exercise of the powers conferred by clause (2) of Article 174 of the Constitution of India, I, Jayachamaraja Wadiyar, Maharaja of Mysore, do hereby prorogue the Session of the State Legislative Assembly at the conclusion of its business on Saturday the 2nd June 1951.

JAYA CHAMARAJA WADIYAR,
Maharaja of Mysore

The House now stands prorogued.

The Assembly was prorogued at Eight Minutes past Twelve of the Clock.

WD 3189—GPB—500—18-9-51